<u>ದಿನಾಂಕಃ **24-01-2024** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಮುಂದುವರೆದ ಪಾಟೀ ಸವಾಲು: ಪ್ರತಿವಾದಿ ಪರ ಶ್ರೀ ಕೆ ಎಸ್ ವಿ ವಕೀಲರಿಂದಃ-</u>

1) ಪ್ರತಿವಾದಿಯ ತಂದೆ ಆದ ಮೀಸೆ ತಿಮ್ಮಪ್ಪ ಮತ್ತು ನಮ್ಮ ಮಧ್ಯೆ ಊರ ಹಿರಿಯರ ಮುಂದೆ ಮಾತುಕತೆ ಆಯಿತು ಎಂದರೆ ಸಾಕ್ಷಿಯು ಪಂಚಾಯತಿದಾರರ ಮುಂದೆ ಆಗಿರುತ್ತದೆ ಆದರೆ ಹಿರಿಯರ ಮುಂದೆ ಆಗಿಲ್ಲ ಎಂದು ಹೇಳುತ್ತಾರೆ. ಏನು ಮಾತುಕತೆ ಆಯಿತು ಎಂದರೆ ಮೀಸೆ ತಿಮ್ಮಪ್ಪ ಹಣದ ತೊಂದರೆ ಇದೆ ಹಾಗಾಗಿ ನಾನು ಮಾರಾಟ ಮಾಡುತ್ತಿದ್ದೇನೆ ನೀನು ತೆಗೆದುಕೊಳ್ಳುತ್ತೀಯಾ ಅಂತಾ ಕೇಳಿದರು ಅದಕ್ಕೆ ನಾನು ಒಪ್ಪಿ ಕೊಂಡಿರುತ್ತೇನೆ. ದಿನಾಂಕ 12-8-1999 ರಂದು ಮಾತುಕತೆ ಆಗಿರುತ್ತದೆ. ದಿನಾಂಕ 20-09-1999 ರಂದು ಸ್ವಾಧೀನ ಕೊಡಲು ಒಪ್ಪಿ ಕೊಂಡಿದ್ದರು. ಮೀಸೆ ತಿಮ್ಮಪ್ಪ ಅಂದರೆ 1 ನೇ ಪ್ರತಿವಾದಿ ತಂದೆ ಕರಾರು ಪತ್ರವನ್ನು ಬರೆಸಿರುತ್ತಾರೆ. ಚನ್ನಬಸಪ್ಪ ಎಂಬ ಪತ್ರ ಬರಹಗಾರರು ಕರಾರು ಪತ್ರವನ್ನು ಬರೆದಿರುತ್ತಾರೆ. ಮೀಸೆ ತಿಮ್ಮಪ್ಪ ಸದರಿ ಕರಾರು ಪತ್ರವನ್ನು ಬರೆಸಿಕೊಂಡು ಬಂದಿದ್ದರಿಂದ ಚನ್ನಬಸಪ್ಪ ಯಾವ ಊರಿನವರು ಎಂಬುದು ನನಗೆ ಗೊತ್ತಿಲ್ಲ. ದಿನಾಂಕ 14-08-1999 ರಂದು ಕರಾರು ಪತ್ರವನ್ನು ಮೀಸೆ ತಿಮ್ಮಪ್ಪ ಬರೆದುಕೊಂಡು ಬಂದಿದ್ದರು. ಸದರಿ ದಿನಾಂಕ 14-08-1999 ರಂದು ನಾನು ಇರಲಿಲ್ಲ. ಮೀಸೆ ತಿಮ್ಮಪ್ಪನಿಗೆ ಓದು ಬರಹ ಬರುತ್ತಿರಲಿಲ್ಲ ಅಂದರೆ ಸರಿ. ಸದರಿ ಕರಾರು ಪತ್ರಕ್ಕೆ ಹೆಚ್ ಜಯಪ್ಪ ತಂದೆ ನಾಗಪ್ಪ , ಚಂದ್ರಶೇಖರಪ್ಪ , ಮೇಲಪ್ಪ , ಶಾಂತಪ್ಪ, ಜಯಪ್ಪ ತಂದೆ ಹಾಲಪ್ಪ , ದುರುಗಪ್ಪ , ಗಂಗಪ್ಪ ಇವರೆಲ್ಲರಲ್ಲಿ ಕೆಲವರು ಸಹಿ ಮಾಡಿರುತ್ತಾರೆ ಹಾಗೂ ಕೆಲವರು ಹೆಬ್ಬೆಟ್ಟಿನ ಗುರುತು ಹಾಕಿರುತ್ತಾರೆ.

2) ದಿನಾಂಕ 20-09-1999 ರಂದು ನಾವು ಹಣವನ್ನು ನೀಡಿರುತ್ತೇವೆ ಅದೇ ದಿನ ಈ ಎಲ್ಲಾ ಸಾಕ್ಷಿದಾರರರು ಸಹಿ ಮತ್ತು ಹೆಬ್ಬೆಟ್ಟಿನ ಗುರುತು ಹಾಕಿರುತ್ತಾರೆ. ಮೀಸೆ ತಿಮ್ಮಪ್ಪ ಈ ಎಲ್ಲಾ ಮೇಲಿನವರನ್ನು ಸಹಿ ಮಾಡಲು ಕರೆಯಿಸಿದ್ದರು. ಎಷ್ಟು ಗಂಟೆಗೆ ಕರೆದಿದ್ದರು ಎಂಬುದು ಗೊತ್ತಿಲ್ಲ ಆದರೆ ಅವರೆಲ್ಲರೂ 11 ಗಂಟೆಗೆ ಬಂದು ಸಹಿ ಮಾಡಿರುತ್ತಾರೆ. ಹೆಬ್ಬೆಟ್ಟಿನ ಗುರುತು ಹಾಕಿದವರನ್ನು ಗುರುತಿಸಿ ಚಂದ್ರಶೇಖರವರು ಚಿಕ್ಕ ಸಹಿ ಮಾಡಿರುತ್ತಾರೆ. ನನಗೆ ಓದಲು ಬರುತ್ತದೆ, ನಾನು ಎಸ್ ಎಸ್ ಎಲ್ ಸಿ ವರೆಗೆ ಓದಿರುತ್ತೇನೆ. ನಿಶಾನೆ ಪಿ -12 ರಲ್ಲಿ ಹಾಕಿರುವ ಹೆಬ್ಬೆಟ್ಟಿನ ಗುರುತನ್ನು ಗುರುತಿಸಿ ಯಾರು ಸಹಿ ಮಾಡಿದ್ದಾರೆ ಅಂದರೆ ಗೊತ್ತಿಲ್ಲ. ಬೆಳಿಗ್ಗೆ 11 ಗಂಟೆಗೆ ದಿನಾಂಕ 20-09-1999 ರಂದು ಆ ಸಮಯದಲ್ಲಿ ಎಲ್ಲಾ ಸಾಕ್ಷಿದಾರರು ಸಹಿ ಮತ್ತು ಹೆಬ್ಬೆಟ್ಟಿನ ಗುರುತು ಹಾಕಿರುತ್ತಾರೆ. ಮೊದಲು ಮೀಸೆ ತಿಮ್ಮಪ್ಪ ಸಹಿ ಮಾಡಿರುತ್ತಾರೆ, ನಂತರ ನಾನು ಸಹಿ ಹಾಕಿರುತ್ತೇನೆ, ನಂತರ ಚಂದ್ರಶೇಖರ, ಹೆಚ್ ಜಯಪ್ಪನವರು ಸಹಿ ಹಾಕಿರುತ್ತಾರೆ, ಆಮೇಲೆ ಮೇಲಪ್ಪನವರು ಸಹಿ ಹಾಕಿರುತ್ತಾರೆ ನಂತರ ಶಾಂತಪ್ಪನವರು ಸಹಿ ಹಾಕಿರುತ್ತಾರೆ, ಕೆ ಜಯಪ್ಪ , ದುರ್ಗಪ್ಪ ಹಾಗೂ ಗಂಗಪ್ಪನವರು ಹೆಬ್ಬೆಟ್ಟಿನ ಗುರುತು ಹಾಕಿರುತ್ತಾರೆ. ಎತ್ತಿನ ಗಾಡಿಯ ಕೀಲಿನ ಎಣ್ಣೆಯಿಂದ ಹೆಬ್ಬೆಟ್ಟಿನ ಗುರುತು ಹಾಕಿರುತ್ತಾರೆ. ಸದರಿ ಎತ್ತಿನ ಗಾಡಿಯು ನಮ್ಮ ಮನೆ ಪಕ್ಕದಲ್ಲಿ ಇತ್ತು. ಸದರಿ ನಾಲ್ಕು ಜನರು ಕೂಡಿಕೊಂಡು ಗುಂಪಾಗಿ ಹೆಬ್ಬೆಟ್ಟಿನ ಗುರುತು ಹಾಕಿರುತ್ತಾರೆ. ಮೀಸೆ ತಿಮ್ಮಪ್ಪ ನವರ ಹೆಬ್ಬೆಟ್ಟಿನ ಗುರುತನ್ನು ಗುರುತಿಸಿ ಯಾರು ಸಹಿ ಹಾಕಿಲ್ಲ ಅಂದರೆ ಸರಿ.

3) 5 ರೂಪಾಯಿ ಎರಡು ಸ್ಟ್ಯಾಂಪ್ ಪೇಪರ್ ಗಳು ಇದ್ದವು. ತಿಮ್ಮಪ್ಪನವರು ಸಾಕ್ಷಿದಾರರಿಗೆ ಸಹಿ ಮತ್ತು ಹೆಬ್ಬೆಟ್ಟಿನ ಗುರುತು ಹಾಕಲು ಹೇಳಿದರು. ನಿಪಿ-12 ರಲ್ಲಿ

ಮೊದಲ ಪುಟಕ್ಕೆ ಮೀಸೆ ತಿಮ್ಮಪ್ಪ ಅವರ ಹೆಬ್ಬಿಟ್ಟಿನ ಗುರುತು ಇರುವುದಿಲ್ಲ. ನಿಪಿ-12 ಕ್ರಯದ ಕರಾರು ಪತ್ರವನ್ನು ನಾನು ಮತ್ತು ಸಾಕ್ಷಿದಾರರು ಸೇರಿ ಸೃಷ್ಟಿ ಮಾಡಿದ್ದೇವೆ ಅಂದರೆ ಸರಿಯಲ್ಲ. ನಿಪಿ-12 ರಲ್ಲಿ ಬಿಕ್ಕಲಂ ದಾರರು ಎಂದು ಚನ್ನಬಸಪ್ಪ ಸಹಿ ಮಾಡಿಲ್ಲ. ಚನ್ನಬಸಪ್ಪ ಬಿಕ್ಕಲಂ ದಾರರ ಅಲ್ಲ ಅವರು ನಿಪಿ-12ರ ಛಾಪಾ ಕಾಗದಗಳನ್ನು ನೀಡಿದ ವ್ಯಕ್ತಿ ಅಂದರೆ ಸರಿಯಲ್ಲ. ನಾನು ಮೀಸೆ ತಿಮ್ಮಪ್ಪ ಅವರನ್ನು ಕರಾರು ಪತ್ರವನ್ನು ಯಾರ ಕಡೆಯಿಂದ ತಯಾರಿಸಿಕೊಂಡು ಬಂದಿದ್ದೀರಿ ಎಂದು ಕೇಳಿರುವುದಿಲ್ಲ.

4) ಮೀಸೆ ತಿಮ್ಮಪ್ಪ ನನ್ನ ತಂದೆಯ ಅಕ್ಕನ ಗಂಡ. ನಾನು ನಿಪಿ-12 ನ್ನು ಓದಿ ತಿಳಿದುಕೊಂಡು ಸಹಿ ಮಾಡಿಲ್ಲ. ನಿಪಿ-12 ರಲ್ಲಿ ಮೀಸೆ ತಿಮ್ಮಪ್ಪ ಅವರ ಹೆಬ್ಬಿಟ್ಟಿನ ಗುರುತು ಇಲ್ಲ ಅಂದರೆ ಸರಿಯಲ್ಲ. ಮೀಸೆ ತಿಮ್ಮಪ್ಪ ಹೆಬ್ಬಿಟ್ಟಿನ ಗುರುತು ಹಾಕುತ್ತಾರೆ ಎಂದು ಗೊತ್ತಿದ್ದರಿಂದ ಬೇರೆಯವರ ಕಡೆಯಿಂದ ಹೆಬ್ಬಿಟ್ಟಿನ ಗುರುತು ಹಾಕಿಸಿರುತ್ತೇನೆ ಅಂದರೆ ಸರಿಯಲ್ಲ. ಹೆಬ್ಬಿಟ್ಟಿನ ಗುರುತುಗಳನ್ನು ಹಾಕುವಾಗ ನಾನು ಜೊತೆಗೆ ಇದ್ದೆ. ನಾವು ಕುಳಿತುಕೊಂಡ ಜಾಗಕ್ಕೂ ಮತ್ತು ಎತ್ತಿನ ಗಾಡಿ ಇದ್ದ ಜಾಗಕ್ಕೂ ಎಷ್ಟು ದೂರ ಇತ್ತು ಎಂದರೆ ಸಾಕ್ಷಿಯು 50 ರಿಂದ 60 ಅಡಿ ದೂರದಲ್ಲಿ ಎತ್ತಿನ ಗಾಡಿ ಇತ್ತು ಎಂದು ಹೇಳುತ್ತಾರೆ. ಎತ್ತಿನ ಗಾಡಿಯು ನಮಗೆ ಸೇರಿದ್ದು ಇತ್ತು.

5) 14-8-1999 ರಂದು ಐದು ಸಾವಿರ ಹಣ ನೀಡಿರುತ್ತೇನೆ. ದಿನಾಂಕ 20-09-1999 ರಂದು 5,600-00 ಹಣವನ್ನು ನೀಡಿರುತ್ತೇನೆ. ಸದರಿ ವ್ಯವಹಾರದ ಮಾತುಕತೆ ಆಗುವ ಸಮಯದಲಕ್ಕಿ ಮೀಸೆ ತಿಮ್ಮಪ್ಪನ ಜೊತೆಗೆ ಯಾರು ಇದ್ದರು ಅಂದರೆ ನಮ್ಮ ಸಂಬಂಧಿಕರು ಮತ್ತು ಹೊರಗಿನವರು ಇದ್ದರು ಎಂದು ಹೇಳುತ್ತಾರೆ. ಅವರೆಂದರೆ

ನಾನು ಮೇಲೆ ಹೇಳಿದ ಎಲ್ಲಾ ಸಾಕ್ಷಿದಾರರಾದ ಹೆಚ್ ಜಯಪ್ಪ ತಂದೆ ನಾಗಪ್ಪ , ಚಂದ್ರಶೇಖರಪ್ಪ , ಮೇಲಪ್ಪ , ಶಾಂತಪ್ಪ, ಜಯಪ್ಪ ತಂದೆ ಹಾಲಪ್ಪ , ದುರುಗಪ್ಪ , ಗಂಗಪ್ಪ ಹಾಕಿರುತ್ತಾರೆ. 5,600-00 ಹಣ ನೀಡುವಾಗ ಯಾವ ಮುಖ ಬೆಲೆ ನೀಡಿದ್ದೀರಿ ಅಂದರೆ ಸಾಕ್ಷಿಯು 500 ಮುಖ ಬೆಲೆಯ ನೋಟುಗಳು ಒಂದು ನೂರು ನೋಟನ್ನು ನೀಡಿರುತ್ತೇನೆ. ದಿನಾಂಕ 14-8-1999 ರಂದು ಐದು ಸಾವಿರ ಹಣ ನೀಡಿರುತ್ತೇನೆ ಸದರಿ ಹಣ ಸಹ 500 ಮುಖ ಬೆಲೆಯ ನೋಟುಗಳನ್ನು ಒಳಗೊಂಡಿತ್ತು. ನಾನು ಮೀಸೆ ತಿಮ್ಮಪ್ಪನಿಗೆ 5000-00 ಮತ್ತು 5,600-00 ಹಣವನ್ನು ನೀಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. 1999 ನೇ ಇಸವಿಯಲ್ಲಿ 500 ಮುಖ ಬೆಲೆಯ ನೋಟುಗಳು ಚಲಾವಣೆಯಲ್ಲಿ ಇರಲಿಲ್ಲ ಅಂದರೆ ಸರಿಯಲ್ಲ. ಸದರಿ ಹಣವು ನಮ್ಮ ಮನೆಯಲ್ಲಿ ಇತ್ತು. ಸದರಿ ಹಣವನ್ನು ನಾನು ನಮ್ಮ ಮನೆಯಲ್ಲಿರುವ ಮೇಕೆಗಳನ್ನು ಮಾರಾಟ ಮಾಡಿ ತಂದು ಇಟ್ಟುಕೊಂಡಿದ್ದೆ. ಎಷ್ಟು ಮೇಕೆಗಳನ್ನು ಮಾರಾಟ ಮಾಡಿದ್ದೀರಿ ಅಂದರೆ ಸಾಕ್ಷಿಯು ಈ ಹಣಕ್ಕೆ ಎಷ್ಟು ಬೇಕಾಗುತ್ತದೆ ಅಷ್ಟು ಮೇಕೆ ಗಳನ್ನು ಮಾರಾಟ ಮಾಡಿದ್ದೆವು. ಆಗ ಒಂದು ಮೇಕೆಗೆ ಒಂದು ಸಾವಿರದಿಂದ 1,200-00 ರವರೆಗೆ ಬೆಲೆ ಇತ್ತು. ನಾವು ಮೇಕೆಗಳನ್ನು ಮೊದಲಿನಿಂದಲೂ ಸಾಕುತ್ತಿದ್ದೇವೆ. ನಮ್ಮ ಪ್ರಮಾಣ ಪತ್ರದಲ್ಲಾಗಲೀ , ವಾದ ಪತ್ರದಲ್ಲಾಗಲೀ ನಾನು ಮೇಕೆಗಳ ಸಾಕಾಣಿಕೆದಾರ ಅಂತಾ ನಮೂದು ಮಾಡಿಲ್ಲ ಅಂದರೆ ಸರಿ. ನನ್ನ ಬಳಿ 10,600-00 ರೂ ಹಣ ಇರಲಿಲ್ಲ ನಾನು ಮೇಕೆಗಳನ್ನು ಮಾರಾಟ ಮಾಡಿ ತಂದಿಟ್ಟುಕೊಂಡಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

6) ಕರಾರು ಪತ್ರದಲ್ಲಿ ಮೊದಲು 5000 ಹಣ ಕೊಟ್ಟಿದ್ದು ನಂತರ 5,600-00 ಹಣ ಕೊಟ್ಟಿದ್ದ ಬಗ್ಗೆ ಬರೆಯಿಸಿರುತ್ತೇನೆ. ದಿನಾಂಕ 14-8-1999 ರಂದು 5,000-00

ಹಣವನ್ನು ಮೀಸೆ ತಿಮ್ಮಪ್ಪನಿಗೆ ಮುಂಗಡವಾಗಿ ನೀಡಿದ್ದೆ ಎಂದು ಕರಾರು ಪತ್ರದಲ್ಲಿ ನಮೂದು ಇಲ್ಲ ಅಂದರೆ ಸರಿಯಲ್ಲ. ಹಾಗಾಗಿ ನಾನು ಮೀಸೆ ತಿಮ್ಮಪ್ಪನ ಹೆಬ್ಬೆಟ್ಟಿನ ಗುರುತನ್ನು ಸೃಷ್ಟಿ ಮಾಡಿ ನಿಪಿ-12 ದಾಖಲೆಯನ್ನು ಸಹ ಸೃಷ್ಟಿ ಮಾಡಿದ್ದೇನೆ ಅಂದರೆ ಸರಿಯಲ್ಲ.

7) ದಿನಾಂಕ 20-09-1999 ರಂದು ನಾನು ಹಣ ಕೊಟ್ಟ ನಂತರ ಮೀಸೆ ತಿಮ್ಮಪ್ಪ ನಮ್ಮನ್ನೆಲ್ಲರನ್ನೂ ಹೊಲಕ್ಕೆ ಕರೆದುಕೊಂಡು ಹೋಗಿ ಇದೇ ನನ್ನ ಹೊಲ ತಿರುಗಾಡಿ ತೋರಿಸಿರುತ್ತಾರೆ. ಮೀಸೆ ತಿಮ್ಮಪ್ಪನಿಗೆ ನಾಲ್ಕು ಜನ ಮಕ್ಕಳು ಇದ್ದರು ಆದರೆ ಒಬ್ಬರನ್ನೇ ಕರೆದುಕೊಂಡು ಹೋಗಿ ವ್ಯವಹಾರ ಮಾಡಿಸಿರುತ್ತೇವೆ. ಖರೀದಿ ಕ್ರಯ ಪತ್ರ ಮಾಡುವ ದಿನದಂದು ಕ್ರಯದ ಬಗ್ಗೆ ಮಾತ್ರ ಮಾತನಾಡಿರುತ್ತೇವೆ ಬೇರೆ ವಿಷಯದ ಬಗ್ಗೆ ಮಾತನಾಡಿರುವುದಿಲ್ಲ. ಆಸ್ತಿಯನ್ನು ಕ್ರಯ ಕ್ಕೆ ತೆಗೆದುಕೊಳ್ಳಬೇಕು ಮತ್ತು 10600-00 ಹಣ ಕೊಡಬೇಕು ಎಂದು ವ್ಯವಹಾರದ ಬಗ್ಗೆ ಮಾತ್ರ ಮಾತುಕತೆ ಆಗಿರುತ್ತದೆ ಹಾಗೂ ಬೇರೆ ಯಾವ ಮಾತುಕತೆ ಆಗಿಲ್ಲ ಅಂದರೆ ಸರಿ.

8) ದಾವಾ ಆಸ್ತಿಯನ್ನು ಸರ್ಕಾರದಿಂದ ಮಂಜೂರು ಮಾಡಿಸಿಕೊಳ್ಳಲು ಮೀಸೆ ತಿಮ್ಮಪ್ಪ ಸಹಕಾರ ಕೊಡಬೇಕು ಎಂಬ ವಿಷಯವು ಮಾತುಕತೆ ಆಗಿಲ್ಲ ಅಂದರೆ ಸರಿಯಲ್ಲ. ನನ್ನ ಪ್ರಮಾಣ ಪತ್ರವನ್ನು ಸೃಷ್ಟಿ ಮಾಡಿಕೊಂಡು ಮತ್ತು ನಿಪಿ೨12 ಕರಾರು ಪತ್ರ ಸೃಷ್ಟಿ ಮಾಡಿಕೊಂಡು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ದಿನಾಂಕ 20-09-1999 ರಿಂದ ದಾವಾ ಆಸ್ತಿಯನ್ನು ನಾನೇ ಸಾಗುವಳಿ ಮಾಡಿಕೊಂಡು ಬರುತ್ತಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಾನು ದಾವಾ ಆಸ್ತಿ ಕಬ್ಜಾದಲ್ಲಿ ಇಲ್ಲದೇ ಇದ್ದರೂ ಸಹ ನಾನೇ ಕಬ್ಜಾದಲ್ಲಿ ಇದ್ದೇನೆ

ಎಂದು ಹೇಳಿ ತಾಲೂಕು ಕಚೇರಿಗೆ ಅರ್ಜಿಯನ್ನು ಬರೆದಿದ್ದೇನೆ ಅಂದರೆ ಸರಿಯಲ್ಲ. ಸುಮಾರು 4-5 ವರ್ಷಗಳ ಹಿಂದೆ ಬಗರ ಹುಕುಂ ಸಮಿತಿಗೆ ಆಸ್ತಿ ಮಂಜೂರು ಮಾಡಲು ಅರ್ಜಿ ಹಾಕಿರುತ್ತೇನೆ. ಸದರಿ ಅರ್ಜಿ ನೀಡಿದ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿ. ಮೀಸೆ ತಿಮ್ಮಪ್ಪ ದಾವಾ ಆಸ್ತಿ ಸಾಗುವಳಿ ಮಾಡುತ್ತಿದ್ದ ಈಗಲೂ ಸಹ ಪ್ರತಿವಾದಿಯರು ದಾವಾ ಆಸ್ತಿ ಸಾಗುವಳಿ ಮಾಡುತ್ತಿದ್ದಾರೆ ಅಂದರೆ ಸರಿಯಲ್ಲ. ನಾನು 20-08-1999 ರಿಂದ ಸಾಗುವಳಿ ಮಾಡುತ್ತಿದ್ದೇನೆ ಎಂದು ಹೇಳುತ್ತಾರೆ.

9) ಸುಮಾರು 20 ರಿಂದ 25 ವರ್ಷದವರೆಗೆ ಮೀಸೆ ತಿಮ್ಮಪ್ಪ ದಾವಾ ಆಸ್ತಿಯನ್ನು ಸಾಗುವಳಿ ಮಾಡಿರುತ್ತಾರೆ. 1 ನೇ ಪ್ರತಿವಾದಿಯು ಗಿಡಗಂಟೆಗಳನ್ನು ಕಾಡನ್ನು ಕಡತಲೆ ಮಾಡಿ ದಾವಾ ಆಸ್ತಿ ಸಾಗುವಳಿ ಮಾಡುತ್ತಿದ್ದ ಅಂದರೆ ಸರಿ. ನಾನು ಮೀಸೆ ತಿಮ್ಮಪ್ಪನ ಕಡೆಯಿಂದ ದಾವಾ ಆಸ್ತಿಯನ್ನು ಖರೀದಿಗೆ ತೆಗೆದುಕೊಂಡ ನಂತರ ನಾನೇ ಗಿಡಗಳನ್ನು ಕಡಿದು ಸಾಗುವಳಿ ಮಾಡುತ್ತಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ಗಿಡಗಳು ಮತ್ತು ಗಿಡದ ಬಡ್ಡೆಗಳು ಇದ್ದವು. ದಾವಾ ಆಸ್ತಿಯನ್ನು ಮೀಸೆತಿಮ್ಮಪ್ಪ ಸಾಗುವಳಿ ಮಾಡಲು ಯೋಗ್ಯವಾಗಿ ಮಾಡಿಸಿದ್ದಾನೆ ನಂತರ ಸಾಗುವಳಿ ಮಾಡುತ್ತಾ ಅವನ ಜೀವಿತ ಕಾಲದಲ್ಲಿ ಇದ್ದ ನಂತರ ಪ್ರತಿವಾದಿಯರು ದಾವಾ ಆಸ್ತಿ ಸಾಗುವಳಿ ಮಾಡುತ್ತಿದ್ದಾರೆ ಅಂದರೆ ಸರಿಯಲ್ಲ.

10) ದಿನಾಂಕ 11-06-2021 ರಂದು ಪ್ರತಿವಾದಿಯರು ದಾವಾ ಆಸ್ತಿಯನ್ನು ಸಾಗುವಳಿ ಮಾಡಲು ತೊಂದರೆ ಮಾಡಿರುತ್ತಾರೆ. ಅದಕ್ಕಿಂತ ಪೂರ್ವದಲ್ಲಿ ಅಂದರೆ

2006 ನೇ ಇಸವಿಯಲ್ಲಿ ತೊಂದರೆ ನೀಡಿರುತ್ತಾರೆ. 2006 ನೇ ಇಸವಿಯ ತಿಂಗಳು, ತಾರೀಖಿನಂದು ತೊಂದರೆ ನೀಡಿದ್ದಾರೆಂದು ಹೇಳಲು ಆಗುವುದಿಲ್ಲ. ದಿನಾಂಕ 11-06-2021 ರಂದು ಪ್ರತಿವಾದಿಯರು ಬೇಸಾಯ ಮಾಡಲು ನನಗೆ ತೊಂದರೆ ಮಾಡಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಾನು ಪೊಲೀಸರಿಗೆ ದೂರು ನೀಡಿದ ನಂತರ ಪ್ರತಿವಾದಿಗಳಿಗೆ ನನ್ನ ಸ್ವಾ ಧೀನದಲ್ಲಿ ತೊಂದರೆ ಮಾಡಬಾರದು ಎಂದು ಪೊಲೀಸರು ಎಚ್ಚರಿಕೆ ನೀಡಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಾನು ಸುಳ್ಳು ಪಿರ್ಯಾದಿಯನ್ನು ಪೊಲೀಸರಿಗೆ ನೀಡಿ ಸುಳ್ಳು ದಾವೆ ಹಾಕಿದ್ದೇನೆ ಅಂದರೆ ಸರಿಯಲ್ಲ. ದಿನಾಂಕ 11-06-2021 ರಂದು ಪ್ರತಿವಾದಿಯರು ಬೆಳಿಗ್ಗೆ 11 ರಿಂದ 12 ಗಂಟೆ ಸಮಯದಲ್ಲಿ ಬಂದು ಪ್ರತಿವಾದಿಯರು ತೊಂದರೆ ನೀಡಿರುತ್ತಾರೆ. ದಾವಾ ಸ್ವತ್ತಿನ ಸುತ್ತಮುತ್ತಲೂ ಜಮೀನುಗಳು ಇರುತ್ತವೆ. ಸದರಿ ತೊಂದರೆ ಕೊಟ್ಟ ಸಮಯದಲ್ಲಿ ಅಕ್ಕಪಕ್ಕದ ಜಮೀನಿನಲ್ಲಿ ಬೇರೆ ಯಾರೂ ಇರಲಿಲ್ಲ. ಆ ಸಮಯದಲ್ಲಿ ಅಕ್ಕಪಕ್ಕದ ಜನರು ಬಂದು ಗಲಾಟೆ ಬಿಡಿಸಿದರು ಎಂದು ನನ್ನ ಮುಖ್ಯ ವಿಚಾರಣೆಯಲ್ಲಿ ನಮೂದು ಮಾಡಿದ್ದೇನೆ ಅಂದರೆ ಸಾಕ್ಷಿ ಸದರಿ ಸಮಯದಲ್ಲಿ ಅಕ್ಕಪಕ್ಕದ ಜಮೀನಿನವರು ಯಾರೂ ಇರಲಿಲ್ಲ ಎಂದು ಹೇಳುತ್ತಾರೆ. ನಾನು ಶಿರಾಳಕೊಪ್ಪ ಠಾಣೆಗೆ ದೂರನ್ನು ನೀಡಿರುತ್ತೇನೆ. ಪೊಲೀಸರು ನನಗೆ ಸ್ವಾ ಧೀನವನ್ನು ಮುಂದುವರೆಸಿರಿ ಮತ್ತು ಪ್ರತಿವಾದಿಗಳಿಗೆ ತೊಂದರೆ ನೀಡಬಾರದು ಎಂದು ಎಚ್ಚರಿಕೆ ನೀಡಿದರು. ಪೊಲೀಸರು ಸಿವಿಲ್ ಸ್ವರೂಪದ ದಾವೆ ಆಗಿದ್ದರಿಂದ ನ್ಯಾಯಾಲಯಕ್ಕೆ ಹೋಗಿ ಬಗೆಹರಿಸಿಕೊಳ್ಳಿ ಎಂದು ತಿಳಿಸಿದ ಬಗ್ಗೆ ನನ್ನ ವಾದ ಪತ್ರದಲ್ಲಿ ನಮೂದು ಮಾಡಿದ್ದೇನೆ ಅಂದರೆ ಸರಿಯಲ್ಲ. ಸುಳ್ಳು ದೂರು ನೀಡಿದ

ನಂತರ ಅದನ್ನು ಮುಂದುವರೆಸಿಕೊಂಡು ಈ ಸುಳ್ಳು ದಾವೆ ಹಾಕಿದ್ದೇನೆ ಅಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ವಕೀಲರು ಸಮಯವಕಾಶ ಕೋರಿದ್ದರಿಂದ ಸಮಯವಕಾಶ ನೀಡಲಾಯಿತು.

(ತೆರೆದನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆ ಬೆರಳಚ್ಚು ಮಾಡಲಾಯಿತು. )

ಓ.ಹೇ.ಕೇ.ಸರಿ.ಇದೆ.

2 ನೇ ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು ಮತ್ತು
ಜೆ .ಎಂ.ಎಫ್.ಸಿ. ಶಿಕಾರಿಪುರ.

ಪ್ರತಿವಾದಿಗಳು ಮತ್ತು ಪ್ರತಿವಾದಿ ಪರ ವಕೀಲರುಗೈರು ಹಾಜರಿದ್ದು ಪಾಟೀ ಸವಾಲು ಮುಂದೂಡಲು ಯಾವುದೇ ಸಕಾರಣ ಇಲ್ಲದೇ ಇರುವುದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಪ್ರತಿವಾದಿ ಪರ ವಕೀಲರು ಪಾಟೀ ಸವಾಲು ಮಾಡಲು ಕಾಲವಕಾಶ ಕೋರಿದ್ದು

ಈಗಾಗಲೇ ಸಾಕಷ್ಟು ಕಾಲವಕಾಶ ನೀಡಿದ್ದು , ಆದ್ದರಿಂದ ಪಾಟೀ ಸವಾಲು ಮುಂದೂಡಲು ಯಾವುದೇ ಸಕಾರವಾದ ಕಾರಣ ಇಲ್ಲದೇ ಇದ್ದುದರಿಂದ ಪಾಟೀ ಸವಾಲು ಮುಕ್ತಾಯ ಎಂದು ತೆಗೆದುಕೊಳ್ಳಲಾಯಿತು.